(ಕರ್ನಾಟಕ ಸರ್ಕಾರ)

# ಪ್ರವಾಸೋದ್ಯಮ ಇಲಾಖೆ

ನಿರ್ದೇಶಕರ ಕಛೇರಿ, ನಂ.3, 4ನೇ ಮಹಡಿ, ಎಂಬಸ್ಸೀ ಐಕಾನ್ ಕಟ್ಟಡ, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು 560001.
ಇ-ಮೇಲ್ : director@karnatakatourism.org ದೂರವಾಣಿ : 080-22352525 ಫ್ಯಾಕ್ಸ್: 080-22352626

ಸಂಖ್ಯೆ: PLN/14/2024-DOT-PLN-DIRECTORATE OF TOURISM ದಿನಾಂಕ: 16-12-2024

## ಪತ್ರಿಕಾ ಪ್ರಕಟಣೆ

ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ / ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಪ್ರವಾಸೋದ್ಯಮ ಇಲಾಖೆಯ ವತಿಯಿಂದ 2024-25ನೇ ಸಾಲಿನಲ್ಲಿ ಪ್ರವಾಸೋದ್ಯಮ/ ಆತಿಥ್ಯ ಕ್ಷೇತ್ರದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಪರಿಶಿಷ್ಟ ಜಾತಿಗೆ ಸೇರಿದ 292 ಅಭ್ಯರ್ಥಿಗಳಿಗೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 162 ಅಭ್ಯರ್ಥಿಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ **Food Craft Institute (FCI), Mysore** ಹಾಗೂ **Institute of Hotel Management (IHM)** ಬೆಂಗಳೂರು ರವರ ಮೂಲಕ ವಸತಿಸಹಿತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಸದರಿ ತರಬೇತಿ ಕಾರ್ಯಕ್ರಮಗಳ ವಿವರ / ಅಭ್ಯರ್ಥಿಗಳ ವಿದ್ಯಾರ್ಹತೆಯ ವಿವರಗಳನ್ನು ಕೆಳಕಂಡ ಕೋಷ್ಟಕದಲ್ಲಿ ವಿವರಿಸಿದೆ.

| ಕ್ರ ಸಂ | ಕಾರ್ಯಕ್ರಮದ ವಿವರ | ಕನಿಷ್ಠ ವಿದ್ಯಾರ್ಹತೆ | ತರಬೇತಿ ಕಾಲಾವಧಿ (By Training Provider + on-the-Job Training (OJT) | ವಯಸ್ಸು | ಪ್ರತಿ ತರಬೇತಿಗೆ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಗುರಿ | ಪ್ರತಿ ತರಬೇತಿಗೆ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಗುರಿ |
|---|---|---|---|---|---|---|
| 1. | Food & Beverage Service Steward | 10th Class Pass | 540 Hours (300 Hours + 240 Hours OJT) 15 Weeks (04 Months) | Above 20 to 45 Years | 100 | 49 |
| 2. | Room Attendant | 5th Class Pass | 540 Hours (300 Hours + 240 Hours OJT) 15 Weeks (04 Months) | Above 20 to 45 Years | 30 | 19 |
| 3. | Front Office Associate | 12th Class Pass | 580 Hours (340 Hours + 240 Hours OJT) 16 Weeks (04 Months) | Above 20 to 45 Years | 15 | 5 |
| 4. | Multi Cuisine Cook | 8th Class Pass | 740 Hours (500 Hours + 240 Hours OJT) 20 Weeks (05 Months) | Above 20 to 45 Years | 147 | 89 |
| | **Total** | | | | **292** | **162** |

ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವ ತರಬೇತಿಗಳನ್ನು ಪಡೆಯಲು ದಿನಾಂಕ: 17/12/2024 ರಿಂದ ಎಲ್ಲಾ ಜಿಲ್ಲೆಗಳಲ್ಲಿನ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯ ಕಛೇರಿಯಲ್ಲಿ ಅರ್ಜಿಗಳನ್ನು ವಿತರಿಸಲಾಗುವುದು.

ಸದರಿ ತರಬೇತಿ ಪಡೆಯಲು ಆಸಕ್ತಿ ಇರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿಗಳನ್ನು ದಿನಾಂಕ: 28/12/2024 ರೊಳಗೆ ಸಂಬಂಧಪಟ್ಟ ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ ಕಛೇರಿಗಳಿಗೆ ಸಲ್ಲಿಸಬಹುದು.

ಈ ತರಬೇತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ / ಸ್ಪಷ್ಟೀಕರಣ ಕುರಿತು ಆಯಾ ಜಿಲ್ಲೆಯ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆಯ ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಹೆಚ್ಚಿನ ವಿವರಗಳಿಗೆ ಸಂಪರ್ಕ: ಬೆಂಗಳೂರು ವಿಭಾಗ: 080-2222441 ಮೈಸೂರು ವಿಭಾಗ: 0821-2422096 ಬೆಳಗಾವಿ ವಿಭಾಗ: 0831-2470879 ಕಲಬುರಗಿ ವಿಭಾಗ: 08472-277848.

ಸಹಿ/-

ಜಂಟಿ ಆಯುಕ್ತರು,